## ಸರ್ಕಾರಿ ಪ್ರೌಢಶಾಲೆ,ರೂಪನಗುಡಿ ಬಳ್ಳಾರಿ ಪೂರ್ವ ವಲಯ

## ಹತ್ತನೆಯ ತರಗತಿಯ ಮಾದರಿ ಪ್ರಶ್ನೆ ಪತ್ರಿಕೆ–6

### ವಿಷಯ: ಪ್ರಥಮ ಭಾಷೆ–ಕನ್ನಡ

**ಗರಿಷ್ಟ ಅಂಕ: 100** **ಅವಧಿ: 3–00**

**ಸೂಚನೆಗಳು:** ಪ್ರಶ್ನೆ ಪತ್ರಿಕೆಯು ಎ, ಬಿ, ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳನ್ನು ನೇರವೂ, ಸ್ಪಷ್ಟವೂ, ಆಗಿದ್ದು, ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ. ಪ್ರತಿ ಪ್ರಶ್ನೆಗೂ ಉತ್ತರಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಉತ್ತರ ಬರೆಯುವುದು ಖಡ್ಡಾಯ

### ವಿಭಾಗ – 'ಎ'

ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **1*9=9**

1. ಗೊರೂರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ?
2. ಧರ್ಮಗಳು ಹಾಕಿಕೊಟ್ಟಿರುವ ತತ್ವಪಾಠ ಏನು?
3. ಬುಕ್ಕರಾಯನ ಹಿರಿಮೆ ಏನು ?
4. 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ ?
5. ಹುಲಿಗೆ ಪರಮಾನಂದವಾಗಲು ಕಾರಣವೇನು ?
6. ಘಟ ಸಂಭೂತ ಯಾರು ?
7. ಪಂಪ ಭಾರತದ ಮತ್ತೊಂದು ಹೆಸರೇನು ?
8. 'ನನ್ನಾಸೆ' ಪದ್ಯವನ್ನು ಬರೆದ ಕವಿಯತ್ರಿಯ ಹೆಸರೇನು ?
9. ಪಾರಿವಾಳಗಳ ಮರಿಗಳು ಎಲ್ಲಿ ಸಿಲಿಕಿಕೊಂಡವು ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ. **10*2=20**

10. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು ?
11. ಬುಕ್ಕತಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹಸವಾನಿಸಿದನು ?
12. ಇಂದಲ್ಲ–ನಾಳೆ ಫಲ ಕೊಡುವ ಅಂಶಗಳಾವುವು ?
13. ಹುಲಿಯು ಹಿಂದಿನಿಂದ ಹಾರಿಕೂಲ್ಲದಿರಲು ಕಾರಣವೇನು ?
14. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು ?
15. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು ?
16. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?
17. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?
18. ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರಿಸಲು ಏಕೆ ಸಾಧ್ಯವಾಗಲಿಲ್ಲ ?
19. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?

ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ವಿವರಿಸಿರಿ. **4*3=12**

20. "ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ"

21. "ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"

22. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಲ್ಲಿರಿ ಹತಾರ"

23. "ಜಾನಕಿಯ ಮಗನಿದಕೆ ಬೆದರುವನೆ"

ಕೆಳಗಿನ ಸಾಹಿತಿಗಳ ಸ್ಥಳ ಕಾಲ,ಕೃತಿಗಳನ್ನು/ಬಿರುದುಗಳನ್ನು ವಾಕ್ಯರೂಪದಲ್ಲಿ ಬರೆಯಿರಿ. **2*3=6**

24. ದುರ್ಗಸಿಂಹ 25. ಜೇಡರದಾಸಿಮಯ್ಯ

ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ **1*4=4**

26. ನೀಲ ಮೇಘ ____________________

____________________ ನೋಡಿದಿರಾ ?

ಅಥವಾ

ಯುಗ-ಯುಗಗಳ ____________________

____________________ ನೋಡಿದಿರಾ ?

ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಸಾರಾಂಶವನ್ನು ಬರೆಯಿರಿ. **1*4=4**

27. " ಮತುಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೂಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ"

ಕೆಳಗಿನ ಪ್ರಶ್ನೆಗಳಿಗೆ ಎಂಟು/ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2*4=8**

28. ಶಬರಿಯು ರಾಮನಿಂದ ಮುಕ್ತಿ ಪಡೆದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ

ಅಥವಾ

ರಾಮನ ಸ್ವಾಗತಕ್ಕಾಗಿ ಶಬರಿಯು ಮಾಡಿಕೂಂಡ ಸಿದ್ಧತೆಗಳನ್ನು ವಿವರಿಸಿ.

29. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?

ಅಥವಾ

ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?

ಕೆಳಗಿನ ಗದ್ಯಭಾಗವನ್ನು ಓದಿಕೂಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **2*2=4**

30. ದಿನಕರ ದೇಸಾಯಿ ಅವರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಅಲಗೇರಿ ಎಂಬ ಪುಟ್ಟ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ದತ್ತಾತ್ರೇಯ ದೇಸಾಯಿ ಅವರು ಶಾಲಾ ಮಾಸ್ತರರಾಗಿದ್ದರು. ತಾಯಿ ಅಂಬಿಕಾ ದಿನಕರರ ಮನಸ್ಸಿನ ತುಂಬಾ ಏಕಾಂತ ಜೀವನ ಪ್ರಕೃತಿಯ ಚೆಲುವು ತುಂಬಿಕೂಂಡಿತು. ರಂಗಾರಾವ ಹಿರೇಕರೂರು

ಅವರು ಮಾರ್ಗದರ್ಶನದಲ್ಲಿ ವಿವಿಧ ಛಂದಸ್ಸುಗಳಲ್ಲಿ ಕಾವ್ಯ ರಚನೆ ಹೆಚ್ಚು ಪ್ರಿಯವಾಯಿತು. ದಿನಕರ ದೇಸಯಿ ಅವರು ಒಟ್ಟು 12 ಕೃತಿಗಳನ್ನು ರಚಿಸಿದ್ದಾರೆ, ಅದರಲ್ಲಿ ದಿನಕರನ "ಚೌಪದಿ" ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರ ಕೃತಿಗಳಲ್ಲಿ ದೀನ–ದಲಿತರ ಬಗ್ಗೆ ಇವರಿಗಿದ್ದ ಕಾಳಜಿ ವ್ಯಕ್ತವಾಗುತ್ತದೆ.ಇವರು ಕವಿತೆಗಳಲ್ಲಿ ಅಲಂಕಾರಿಕ ಕುಸುರಿ ಕೆಲಸವನ್ನು ಇಷ್ಟಪಡದೆ ನೇರವಾಗಿ ಮನಸ್ಸಿಗೆ ನಾಟುವಂತೆ ಬರೆಯುವ ಬರವಣಿಗೆಯನ್ನು ಇಷ್ಟ ಪಟ್ಟು ಬರೆಯುತ್ತಿದ್ದರು. ಇದು ಇವರಿಗೆ ಪ್ರಿಯವಾಗಿತ್ತು. ಇವರನ್ನು "ಚುಟುಕುಗಳ ಬ್ರಹ್ಮ" ಎಂದು ಕರೆಯುತ್ತಾರೆ.

1. ದಿನಕರ ದೇಸಾಯಿಯವರ ಬಾಲ್ಯ ಜೀವನವನ್ನು ತಿಳಿಸಿ.

2. ದಿನಕರ ದೇಸಾಯಿಯವರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗಳೇನು?

## ವಿಭಾಗ 'ಬಿ'

ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ. ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. **10*1=10**

**31.** ಕನ್ನಡ ವರ್ಣಮಾಲೆಯಲ್ಲಿನ ಙ,ಞ,ಣ,ನ,ಮ ಗಳನ್ನು ಹೀಗೆಂದು ಕರೆಯುತ್ತಾರೆ.

ಎ) ಸ್ವರಗಳು ಬಿ) ವ್ಯಂಜನಗಳು ಸಿ) ಅನುನಾಸಿಕಗಳು ಡಿ) ಮಹಾಪ್ರಾಣಾಕ್ಷರಗಳು.

**32.** ಕನ್ನಡದ ಆದೇಶ ಸಂಧಿಗೆ ಉದಾಹರಣೆಯಿದು.

ಎ) ಹೂಸಗಾಲ ಬಿ) ತೆರದಿಕ್ಕುವ ಸಿ) ಮನೆಯೊಳಗೆ ಡಿ) ದಿಗಂತ.

**33.** ದ್ವಂದ್ವ ಸಮಾಸದ ಪದವಿದು.

ಎ) ಹೆಮ್ಮರ ಬಿ) ರಾಮಲಕ್ಷ್ಮಣರು ಸಿ) ಮೋಸಮಾಡು ಡಿ) ನವರಾತ್ರಿ.

**34.** ಅನ್ವರ್ಥಕನಾಮ ಪದಕ್ಕೆ ಉದಾಹರಣೆಯಿದು.

ಎ) ಅವನು ಬಿ) ಸಂಜನ ಸಿ) ಶಂಕರ ಡಿ) ಪೂಜಾರಿ

**35.** ಒಂದು ಅಥವ ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು –

ಎ) ಮಿಶ್ರವಾಕ್ಯ ಬಿ) ಸಾಮನ್ಯ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ಪ್ರಶ್ನಾರ್ಥಕ ವಾಕ್ಯ.

**36.** "ಕಾರ್ಖಾನೆ" ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

ಎ) ಪಾರ್ಸಿ ಬಿ) ಇಂಗ್ಲಿಷ್ ಸಿ) ಉರ್ದು ಡಿ) ಹಿಂದೂಸ್ತಾನಿ.

**37.** "ಮನದೊಳಗೆ" ಪದದಲ್ಲಿ ಇರುವ ವಿಭಕ್ತಿ.

ಎ) ಚತುರ್ಥಿ ಬಿ) ಪಂಚಮಿ ಸಿ) ದ್ವಿತೀಯ ಡಿ) ಸಪ್ತಮಿ.

**38.** ಸಂಬಂಧಾರ್ಥಕ ಅವ್ಯಯಕ್ಕೆ ಉದಾಹರಣೆಯಿದು.

ಎ) ಅಹುದು ಬಿ) ಅದುವೇ ಸಿ) ಅಥವಾ ಡಿ) ಅಯ್ಯೋ.

**39.** ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ –

ಎ) ಉದ್ಧರಣ ಬಿ) ವಾಕ್ಯವೇಷ್ಟನ ಸಿ) ಆವರಣ ಡಿ) ವಿವರಣ.

**40.** ಕರ್ಮಣಿ ರೂಪದಲ್ಲಿರುವ ಕ್ರಿಯಾರೂಪದ ಪದ.

ಎ) ಒದುತ್ತಾರೆ ಬಿ) ಓದಲ್ಪಟ್ಟಿತು ಸಿ) ಓದಿದರು ಡಿ) ಓದಿಯಾರು.

ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಪದವನ್ನು ಬರೆಯಿರಿ. **4*1=4**

**41.** ಅಂಜಿಕೆ : ಕೃದಂತಭಾವನಾಮ :: ಕನ್ನಡಿಗ : ________________

**42.** ಸೊಪ್ಪು–ಸದೆ : ಜೋಡುನುಡಿ :: ತಿರುತಿರುಗಿ : ______________

**43.** ಆರ್ತತೆ : ಬಯಕೆ :: ಕುಮುಕಿ : ________________

**44.** ವ್ಯಾಪಾರಿ : ಬೇಹಾರಿ :: ಶುನಕ : ___________________

ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ , ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರನ್ನು ಬರೆಯಿರಿ. **4*1=4**

**45.** " ಭಾನುವೆ ಸಾಲದೆ ಪಗಲೆನಿ

ತಾನುಂ ದೀವಿಗೆಗಳುರಿ ದೊಡೆಂ ನಂದಿದೊಡೇಂ "

ಅಥವಾ

"ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ"

ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣದೊಂದಿಗೆ ಸಮನ್ವಯಿಸಿ. **1*3=3**

**46.** "ಸತಿ ಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ"

ಅಥವಾ

"ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"

ವಿಭಾಗ 'ಸಿ'

**47.** ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. **1*3=3**

1. ಕಟ್ಟುವುದು ಕಠಿಣ, ಕೆಡುವುದು ಸುಲಭ.
2. ಶಕ್ತಿಗಿಂತ ಯುಕ್ತಿ ಮೇಲು.
3. ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು.

**48.** ನಿಮ್ಮ ಶಾಲೆಯಲ್ಲಿ ಆಚರಿಸಿದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿ 'ಕನ್ನಡ ಪ್ರಭ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ. **1*5=5**

ಅಥವಾ

ನೀವು ಬಳ್ಳಾರಿಯ ಸರ್ಕಾರಿ ಪ್ರೌಢ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿ ಸಂಜನ ಎಂದು ಭಾವಿಸಿಕೊಡು ಹೊಸ ಪರೀಕ್ಷಾ ಪದ್ಧತಿಯ ಕುರಿತು ನಿಮ್ಮ ಅಣ್ಣನವರಿಗೆ ನಿಮ್ಮ ಒಂದು ಪತ್ರ ಬರೆಯಿರಿ.

**49.** ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1*5=5**

1. ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ.
2. ಭ್ರಷ್ಟಾಚಾರ ನಿರ್ಮೂಲನೆ.
3. ಜಾಗತಿಕ ತಾಪಮಾನ ಹೆಚ್ಚಳಕ್ಕೆ ಕಾರಣಗಳು.